

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ** ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೪೮

**ಮ**ಹಾರಾಜರಿಗೆ ಶ್ಯಾಮಲಾತಾಲ್ ಬಹು ಸೊಗಸೆನಿಸಿತು. ದಿನವೂ ಸಂಜೆ ಅರ್ಧ ಗಂಟೆ ಸುತ್ತಾಡಿ ಬರುತ್ತಿದ್ದರು. ಓದುವ-ಬರೆಯುವ ಕೆಲಸವೂ ಆರಂಭಗೊಂಡಿತ್ತು. ಸೊಸೆಯಮ್ಮ (ಮಿಸೆಸ್ ಗರ್ಟ್ರೂಡ್ ಸೇನ್) ಹೊಸದಾಗಿ ಪ್ರಕಟಿತವಾದ ತಮ್ಮ ಪುಸ್ತಕ—The Pagent of Indian History (ಭಾರತ ಇತಿಹಾಸದ ವೈಭವೋತ್ಸವ)ವನ್ನು ಮಹಾರಾಜರಿಗೆ ಕಳುಹಿಸಿ ಕೊಟ್ಟಿದ್ದರು. ವಿದೇಶಿ ಪತ್ರಿಕೆಗಳಲ್ಲಿ ಈ ಪುಸ್ತಕದ ಬಗ್ಗೆ ಉತ್ತಮ ಪ್ರಶಂಸೆಗಳು ವ್ಯಕ್ತವಾಗಿದ್ದವು. ಮಹಾರಾಜರಿಗೂ ಇದು ಬಹಳ ಇಷ್ಟವಾಯಿತು. ಆಕೆಗೆ ಪತ್ರದ ಮೂಲಕ ಆಶೀರ್ವದಿಸಿದರು. ರೋಮಾ ರೋಲಾ ಮರಣಾನಂತರ ಪ್ರಕಟವಾಗಿದ್ದ ಅವರ ಜೀವನಚರಿತ್ರೆಯನ್ನು ಮಾಯಾವತಿಯಿಂದ ಕಳುಹಿಸಲಾಗಿತ್ತು. ಅದನ್ನೂ ಸಹ ಮಹಾರಾಜರು ಓದಿದರು. ಆಧ್ಯಾತ್ಮಿಕ ಸಾಧನೆಗೆ ಸಂಬಂಧಿಸಿದ ವಿರಜಾನಂದರ ಉಪದೇಶಗಳ ಸಂಗ್ರಹವಾದ 'ಪರಮಾರ್ಥ ಪ್ರಸಂಗ' ಎಂಬ ಪುಸ್ತಕವು ಕೆಲವು ವರ್ಷಗಳ ಹಿಂದೆಯೇ ಪ್ರಕಟಿತವಾಗಿತ್ತು. ಅದರ ಇಂಗ್ಲಿಷ್ ಅನುವಾದವು ಕೊಲ್ಕತ್ತೆಯಲ್ಲಿ ಮುದ್ರಿತವಾಗಿತ್ತು.[∩] ಅದರ ಸಂಸ್ಕರಣವನ್ನು ಸಹ ಮಹಾರಾಜರು ಮಾಡುತ್ತಿದ್ದರು. ಕೊಲ್ಕತ್ತೆಯ ಹಾಲಿವುಡ್ ವೇದಾಂತ ಕೇಂದ್ರದ ಮುಖ್ಯಸ್ಥರಾದ ಸ್ವಾಮಿ ಪ್ರಭವಾನಂದರ ಪ್ರಯತ್ನದಿಂದಾಗಿ ಈ ಪುಸ್ತಕದ ಅಮೇರಿಕನ್ ಆವೃತ್ತಿಯು 'ಹಾರ್ಪರ್ ಬ್ರದರ್ಸ್' ಅವರಿಂದ ಪ್ರಕಟಗೊಳ್ಳುತ್ತಿತ್ತು. ಇದಕ್ಕೆ ಸಂಬಂಧಿಸಿದಂತಹ ಕೆಲಸಗಳೂ ಇದ್ದವು. ಅಲ್ಲದೆ ಬಹಳ ಹಿಂದೆ 'ಪ್ರಬುದ್ಧ ಭಾರತ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿರಜಾನಂದರ ಕೆಲವು ಇಂಗ್ಲಿಷ್ ಪ್ರಬಂಧಗಳನ್ನು ಒಟ್ಟಿಗೆ ಕಲೆಹಾಕಿದ್ದರು. ಅದನ್ನೂ ಸಹ ಪರಿಶೀಲಿಸುತ್ತಿದ್ದರು. ಅದೂ ಸಹ ಪುಸ್ತಕ ರೂಪದಲ್ಲಿ ಹೊರಬರುವುದಿತ್ತು.

ದುರ್ಗಾಪೂಜೆಯ ದಿನಗಳು ಬಂದಿವೆ. ಪಂಚಮಿಯ ದಿನ ಮಹಾರಾಜರು ತಮ್ಮಲ್ಲೇ ಹಾಡನ್ನು ಗುನುಗುನಿಸುತ್ತಿದ್ದಾರೆ, 'ನಡೀ ನಡೀ ಗಿರಿ, ಕರೆದು ತಾರೆನ್ನ ಗೌರಿ, ನನ್ನ ಉಮೆ ಏನೋ ಬಹಳ ಅತ್ತಂತಿದೆ' ಇತ್ಯಾದಿ. ಮೂರು ವರ್ಷಗಳ ನಂತರ ಶ್ಯಾಮಲಾತಾಲಿನಲ್ಲಿ ಪೂಜಾದಿನಗಳಲ್ಲಿ ವಿರಜಾನಂದರ ಉಪಸ್ಥಿತಿಯಲ್ಲಿ ಸಂತೋಷ ಸಮಾರಂಭಗಳು ಜರುಗಿದವು. ಪ್ರತಿಯೊಬ್ಬ ಆಶ್ರಮವಾಸಿಯೂ ಮಹಾರಾಜರಿಂದ ಹೊಸ ಬಟ್ಟೆ, ಉತ್ತರೀಯ, ಧೂಪ ಮುಂತಾದವುಗಳನ್ನು ಉಡುಗೊರೆ ಯಾಗಿ ಪಡೆದರು. ದಶಮಿಯ ದಿನ 'ವಿಜಯಾ ಸಮ್ಮೇಳನ'ವು ವಿರಜಾನಂದರ ಕೊಠಡಿಯಲ್ಲಿ ಎರಡು ಗಂಟೆಗಳ ಕಾಲ ನಡೆಯಿತು. ಪ್ರತಿಯೊಬ್ಬರನ್ನೂ ಮಹಾರಾಜರು ಆಲಂಗಿಸಿಕೊಂಡರು. ತಮ್ಮ ಮಾರ್ಗದರ್ಶನದಲ್ಲಿ ತಯಾರಾಗಿದ್ದ ಕಡ್ಲೆ ಹಿಟ್ಟಿನ ಬರ್ಫಿಯನ್ನು ನೀಡಿ ಎಲ್ಲರ ಬಾಯನ್ನು ಸಿಹಿಗೊಳಿಸಿದರು. ನಂತರ ಭಜನೆಯ ಕಾರ್ಯಕ್ರಮ ಮೊದಲು ದೇವೀ ಸಂಕೀರ್ತನೆ, ನಂತರ ಶಿವನ ಸಂಕೀರ್ತನೆ. ಡಾಕ್ಟರ್ ಸ್ವಾಮಿಗಳು ತಾಳವನ್ನು ಹಾಕುತ್ತಿದ್ದರು. ಭಜನೆಯ ಉನ್ಮಾದದಲ್ಲಿ ಯಾವಾಗಲೋ ತಾಳಗಳ ದಾರವು ಹರಿದುಹೋಗಿದೆ; ಅದರ ಬಗ್ಗೆ ಅವರಿಗೆ ಗಮನವೇ ಇಲ್ಲ! ಭಾವೋದ್ವೇಗ ಪೂರಿತವಾದ ಹಾಡಿನ ರಾಗ, ಲಯಕ್ಕೆ ಉನ್ಮತ್ತರಾಗಿ ಅನಾಡಿ ತಬಲಾ ನುಡಿಸುವವರೂ ಸಹ ಹಾಡಿಗೆ ತಮ್ಮ ಧ್ವನಿಗೂಡಿಸಿದ್ದಾರೆ. ಕೊನೆಕೊನೆಗೆ ಅವರ ಬೆರಳುಗಳು ತಬಲಾವನ್ನು ಸ್ಪರ್ಶಿಸುತ್ತಲೇ ಇಲ್ಲ. ಒಂದು ಇಂಚು ಮೇಲೆಯೇ, ಶೂನ್ಯದಲ್ಲೇ ಓಡಾಡುತ್ತಿವೆ! ಮಹಾರಾಜರು ಆರಾಮಕುರ್ಚಿ ಯಲ್ಲಿ ಕುಳಿತು ಭಾವಪರವಶತೆಯಿಂದ ತಲೆಯಾಡಿಸುತ್ತ ಹೇಳುತ್ತಿದ್ದಾರೆ, 'ಭೇಷ್! ಭೇಷ್!'

ಶ್ಯಾಮಲಾತಾಲ್ ಮಹಾರಾಜರಿಗೆ ತುಂಬ ಹಿಡಿಸಿಬಿಟ್ಟಿದೆ. 'ಈ ಬಾರಿ ಚಳಿಗಾಲದಲ್ಲಿ ಕೆಳಕ್ಕಿಳಿಯುವುದಿಲ್ಲ. ಒಂದು ವರ್ಷ ಪೂರ್ತಿ ಇಲ್ಲಿದ್ದು, ಆರೋಗ್ಯದಲ್ಲಿ ಏನಾದರೂ ಸ್ಥಾಯಿ ಪರಿಣಾಮ ಉಂಟಾಗುತ್ತದೆಯೋ ಎಂದು ನೋಡುವೆ' ಎಂದು ಮಠಕ್ಕೆ ಅವರು ಬರೆದು ತಿಳಿಸಿದರು. ಮಹಾರಾಜರ ಸೇವೆ ಮಾಡುತ್ತಿದ್ದ ಇಬ್ಬರು ಬ್ರಹ್ಮಚಾರಿಗಳಿಗೆ ಈ ಬಾರಿ ಸಂನ್ಯಾಸವಾಗಬೇಕಾಗಿತ್ತು; ಅವರಂದುಕೊಳ್ಳುತ್ತಿದ್ದಾರೆ, 'ಆಯ್ತಿನ್ನು! ಮಹಾರಾಜ ರೇನಾ ದರೂ ಮಠಕ್ಕೆ ಹಿಂತಿರುಗದಿದ್ದರೆ ನಮ್ಮ ಬಹುದಿನಗಳ ಆಸೆಯು ನೀರುಪಾಲಾದಂತೆಯೇ' ಎಂದು. ಇತರ ಸಂನ್ಯಾಸಿ ಗಳು ಅವರಿಗೆ ಆಶ್ವಾಸನೆ ನೀಡುತ್ತ ಹೇಳುತ್ತಿದ್ದಾರೆ, 'ಒಂದು ವರ್ಷದ ನಂತರ ಸಂನ್ಯಾಸವಾದರೆ ತಾನೇ ಏನು ತೊಂದರೆ? ಅವರ ಆರೋಗ್ಯ ಇಲ್ಲಿ ಚೆನ್ನಾಗಿರುವುದಾದರೆ ಅದೇ ಒಂದು ಮಹಾ ಭಾಗ್ಯವಲ್ಲವೆ?'

[∩] 'ಪರಮಾರ್ಥ ಪ್ರಸಂಗ'ದ ಹಿಂದೀ ಅನುವಾದವು ನಾಗಪುರ ಆಶ್ರಮದಿಂದ ಈ ಸಮಯದಲ್ಲೇ ನಡೆಯುತ್ತಿತ್ತು .

ಎಂದು.

ಆದರೆ ಇತ್ತ ವಿಧಿಯು ನಗುತ್ತಿದ್ದಾನೆ!

ಮಹಾರಾಜರು ಹೇಗಿದ್ದರೂ ಈ ಬಾರಿ ದೀರ್ಘಕಾಲ ಶ್ಯಾಮಲಾತಾಲ್‌ನಲ್ಲಿರುತ್ತಾರೆ; ಈ ಸುವರ್ಣಾವಕಾಶವನ್ನು ಉಪಯೋಗಿಸಿಕೊಂಡು, ಅವರ ಸತ್ಸಂಗ ಪಡೆಯುವ ಉದ್ದೇಶ ದಿಂದ ಹಲವಾರು ಪತ್ರಗಳು ಬರುತ್ತಲಿವೆ: 'ನಿಮ್ಮ ಶ್ರೀಚರಣ ಗಳಲ್ಲಿ ಕೆಲಕಾಲ ನೆಲೆಸುವ ಅವಕಾಶ ನೀಡಿ, ದಯವಿಟ್ಟು' ಎಂಬುದಾಗಿ ವಿನಂತಿಸಿಕೊಂಡು. ಮಹಾರಾಜರು ಅದಕ್ಕೆ, 'ಇಲ್ಲಿ, ಈ ಬಾರಿ ಯಾರೂ ಯಾವ ಕಾರಣಕ್ಕೂ ಬರಬಾರದು' ಎಂದು ಬರೆದೇಬಿಟ್ಟರು.

ಆದರೆ ಇದೇನು?! ಡಿಸೆಂಬರ್ ೧೨ರಂದು ಅಪರಾಹ್ನ ೩.೩೦ರ ಹೊತ್ತಿಗೆ ಕೈಯಲ್ಲೊಂದು ಹಿತ್ತಾಳೆಯ ತಂಬಿಗೆ ಬಗಲಲ್ಲಿ ಬಟ್ಟೆ-ಕಂಬಳಿಯ ಚಿಕ್ಕ ಗಂಟು, ಮುಖದಲ್ಲಿ ಅಲ್ಪಸ್ವಲ್ಪ ಹಣ್ಣಾದ ಗಡ್ಡ-ಮೀಸೆ, ತಲೆಯಲ್ಲಿ ಒರಟು ಕೂದಲಿನ ರಾಶಿ ಹೊತ್ತು ಆಶ್ರ ಮದ ಪ್ರಾಂಗಣದಲ್ಲಿ ನಿಂತಿರುವವರಾರು?! ಅವರೇ ಬಾಬು ಜಯನಾಥ ಪ್ರಸಾದ್, ರಾಜಗಿರಿಯ ಬಿಹಾರಿ ಭಕ್ತ. ತೀರ್ಥ ಯಾತ್ರೆಗೆಂದು ಹೊರಟವರು. ಬೃಂದಾವನದ ದರ್ಶನವಾದ ಮೇಲೆ ಮಹಾರಾಜರನ್ನು ನೋಡಿ ನಮಸ್ಕರಿಸಬೇಕೆಂದು ಮನಸ್ಸು ತುಂಬ ತಳಮಳಗೊಂಡಿತು. ಅದನ್ನು ತಿಳಿದ ಅಲ್ಲಿಯ ಸೇವಾ ಶ್ರಮದ ಮುಖ್ಯಸ್ಥರಾದ ಹಿರಣ್ಮಯಾನಂದರು, ''ಮೊದಲು ಮಹಾರಾಜರಿಗೊಂದು ಪತ್ರ ಬರೆದು ಅವರ ಸಮ್ಮತಿಯನ್ನು ಪಡೆದುಕೊಂಡು ಶ್ಯಾಮಲಾತಾಲ್‌ಗೆ ಹೋಗಿ, ಈ ಬಾರಿ ಅವರು ಯಾರಿಗೂ ಅಲ್ಲಿ ಹೋಗಲು ಅನುಮತಿ ಕೊಡುತ್ತಿಲ್ಲವೆಂದು ಕೇಳಿರುವೆ'' ಎಂದರು. ಜಯನಾಥರು ನಾಲ್ಕು ಪುಟಗಳ ದೀರ್ಘ ಪತ್ರದ ಕರಡನ್ನು ಬರೆದರು. ಇಷ್ಟರಲ್ಲಿ ಸೇವಾಶ್ರಮದ ಮತ್ತೊಬ್ಬ ಸಂನ್ಯಾಸಿಗಳು ಅವರಿಗೆ, ''ಹೋಗುತ್ತಿರುವುದು ಗುರುದೇವರ ದರ್ಶನಕ್ಕೆ. ಅದಕ್ಕೆ ಯಾಕೆ ಅಷ್ಟೊಂದು ಅನುಮತಿ-ಗಿನುಮತಿ ಗಳು? ಗುರುಗಳು ಏನೋ ಸ್ವಲ್ಪ ಗದರಿಸಬಹುದು, ಅದು ಸಹ ಆಶೀರ್ವಾದವೇ ಅಲ್ಲವೆ?'' ಎಂದು ಚುಚ್ಚಿಕೊಟ್ಟರು.

ಸರಿ, ಜಯನಾಥರು ಪತ್ರವನ್ನು ಅಂಚೆಗೆ ಹಾಕದೆ ಹಾಗೆಯೇ ಶ್ಯಾಮಲಾತಾಲಿಗೆ ನಡೆದರು. ಇಲ್ಲಿ ಸೇವಕರು ಹೇಳು ತ್ತಿದ್ದಾರೆ ''ಬಾಬೂಜೀ, ನೀವು ಹೀಗೇ ಹಠಾತ್ ಬಂದು ಬಿಟ್ಟಿ ರೇನು? ಮಹಾರಾಜರು ತುಂಬ ಕೋಪಿಸಿಕೊಳ್ಳುತ್ತಾರೆ. ಮೊದಲು ಪತ್ರ ಬರೆಯುವುದು ಉಚಿತವಿತ್ತು'' ಎಂದು.

''ಓ ತೋ ಲಿಖ ರಖಾಥಾ, ಬಲ್ಕಿ, ಡಾಕ್ ಮೇ ನಹೀ ಡಾಲಾ, ದೇಖಿಯೇ ''(ನಾನೇನೋ ಪತ್ರ ಬರೆದೆ. ಆದರೆ ಅದನ್ನು ಅಂಚೆಗೆ ಹಾಕಲಿಲ್ಲ, ಇಲ್ಲಿ ನೋಡಿ) ಎನ್ನುತ್ತ ತಮ್ಮ ಹರಿದ ಜೇಬಿನಿಂದ ಜಯನಾಥ ಪ್ರಸಾದ್ ಬಾಬು ಪತ್ರವನ್ನು ತೋರಿಸಿದರು.

'ಇರಲಿ ಬಿಡಿ, ನೀವಂತೂ ಬಂದುಬಿಟ್ಟಿದ್ದೀರಿ. ನಿಮ್ಮನ್ನು ಮಹಾರಾಜರಲ್ಲಿಗೆ ಕರೆದುಕೊಂಡು ಹೋಗುವೆ, ನಂತರ ನೀವೇ ತಿಳಿಯುವಿರಿ' ಎಂದರು ಆ ಸೇವಕರು.

ಜಯನಾಥರು ಅಚಲ ವಿಶ್ವಾಸದ ನಗೆ ನಕ್ಕು—'ಉಹ್! ಕುಛ್ ಫಿಕರ್ ಮತ್ ಕೀಜಿಯೇ, ಮೈ ಸಬ್ ಠೀಕ್ ಕರ್ ಲೂಂಗಾ' (ನೀವೇನೂ ಚಿಂತಿಸಬೇಡಿ, ನಾನೆಲ್ಲ ಸರಿಮಾಡಿ ಬಿಡುವೆ) ಎಂದರು.

ಸಂಜೆ ವಿರಜಾನಂದರು ಗಾಜಿನ ವರಾಂಡಾದಲ್ಲಿ ಕುಳಿತಿ ದ್ದಾರೆ; ಬಾಬು ಜಯನಾಥ ಪ್ರಸಾದರು ಬಂದಿರುವ ವಿಷಯ ವನ್ನು ಇಷ್ಟರೊಳಗೆ ತಿಳಿಸಿಯಾಗಿದೆ. ಮಹಾರಾಜರು 'ಎರಡು ದಿನ ಇಲ್ಲಿದ್ದು ಹೊರಟುಬಿಡಲಿ' ಎಂದಿದ್ದರು ಬೇಸರದಿಂದ. ಇತ್ತ ಜಯನಾಥಜಿ ವರಾಂಡಾವನ್ನು ಪ್ರವೇಶಿಸುತ್ತಲೇ ಆ ಮರದ ನೆಲದಲ್ಲಿ ಲಂಬವಾಗಿ ಬೋರಲು ಬಿದ್ದು, ಜೋರಾಗಿ ಅಳುವ ಶಬ್ದ ಮಾಡುತ್ತ, ಕೈಕಾಲು ಬಡಿಯುತ್ತ 'ಜೂತಿ ಮಾರಿಯೇ, ಜೂತಿ ಮಾರಿಯೇ. ಬಹುತ್ ಗಲ್ತಿ ಕಿಯಾ, ಬಹುತ್ ಗಲ್ತಿ ಕಿಯಾ' (ಚಪ್ಪಲಿಯಲ್ಲಿ ಹೊಡೆಯಿರಿ, ಚಪ್ಪಲಿಯಲ್ಲಿ ಹೊಡೆ ಯಿರಿ, ತುಂಬ ತಪ್ಪು ಮಾಡಿದೆ, ತುಂಬ ತಪ್ಪು ಮಾಡಿದೆ) ಎನ್ನತೊಡಗಿದರು.

ಈ ಮನುಷ್ಯನು ಮೂರ್ಛೆರೋಗಿಯೇನೋ, ಕೈಕಾಲು ಬಡಿದುಕೊಂಡು ಈಗಲೇ ಪ್ರಾಣಬಿಡುವನೇನೋ ಎಂಬ ಭಯ ದಿಂದ ಮಹಾರಾಜರ ಮುಖ ವಿವರ್ಣವಾಗಿದೆ! ಇನ್ನು ಶಿಕ್ಷೆ ನೀಡುವುದಾದರೂ ಹೇಗೆ?! ನೆಲಕ್ಕೆ ಬಿದ್ದವನ ತಲೆಯ ಮೇಲೆ ಕೈಯಾಡಿಸುತ್ತ ಹೇಳುತ್ತಿದ್ದಾರೆ ''ಕುಛ್ ಗಲ್ತಿ ನಹೀ, ಉಠೋ ಉಠೋ (ಏನೂ ತಪ್ಪಿಲ್ಲ , ಏಳಪ್ಪಾ!)'' ಜಯನಾಥರು ಎದ್ದು ನಿಂತು, ಬಟ್ಟೆ ಒದರಿಕೊಳ್ಳುತ್ತ, ಸೇವಕರ ಕಡೆ ತಿರುಗಿ ವಿಜಯದ ನಗೆ ಬೀರಿದರು. ಎರಡು ದಿನವಲ್ಲ ಪೂರ್ತಿ ಆರು ದಿನಗಳಿದ್ದರು. ಮೊದಲನೇ ದಿನ, ''ನನಗೆ ತಿಂದರೂ ಆಯ್ತು, ತಿನ್ನದಿದ್ದರೂ ಆಯ್ತು'' ಎಂದವರು, ತುಪ್ಪ ಸವರಿದ ತಾಜಾ ಗೋಧಿಯ ಚಪಾತಿಗಳ ರುಚಿ ಕಂಡ ಮೇಲೆ ಇಪ್ಪತ್ತು ಚಪಾತಿಗಳನ್ನು ಉಡಾ ಯಿಸುತ್ತಿದ್ದರು. ಜೊತೆಗೆ ನಾಲ್ಕು ಜನರಿಗಾಗುವಷ್ಟು ತೊವ್ವೆ-ತರಕಾರಿಗಳನ್ನೂ ಚಪ್ಪರಿಸುತ್ತಿದ್ದರು. ತುಂಬ ಆನಂದದಲ್ಲಿದ್ದರು, ಆಶ್ರಮವಾಸಿಗಳಿಗೂ ಆನಂದ ನೀಡಿದರು. ಸ್ವಾಮೀಜಿಯವರ ಇಂಗ್ಲಿಷಿನಲ್ಲಿ ಬರೆದ ಸಂನ್ಯಾಸಿ ಗೀತೆಯನ್ನು ಇವರು ಹಿಂದಿಗೆ ಅನುವಾದಿಸಿದ್ದರು. ಒಂದು ದಿನ ಗಾಜಿನ ವರಾಂಡಾದಲ್ಲಿ ವೀರ ಭಂಗಿಯಲ್ಲಿ ನಿಂತು ಎಲ್ಲರ ಮುಂದೆ ಅದನ್ನು ಹಾಡಿದರು. ಅವರ ಹೆಂಡತಿಯ ಹೆಸರು ಕಮಲಾ. ಜಯನಾಥಜೀ ಆಕೆಯ ಬಗ್ಗೆ ಹೇಳುವಾಗಲೆಲ್ಲ Mother Kamala (ತಾಯಿ ಕಮಲಾ) ಎನ್ನುತ್ತಿದ್ದರು. ಶ್ರೀರಾಮಕೃಷ್ಣರು ತಮ್ಮ ಸಹಧರ್ಮಿಣಿಯನ್ನು 'ಮಾ' ಎಂದಿದ್ದರಲ್ಲ ಅದಕ್ಕೆ!

೧೯೪೮ನೇ ವರ್ಷವೂ ಮುಗಿಯಿತು. ಯಕೃತ್ತಿನ ದೋಷದಿಂದಾಗಿ ಮಹಾರಾಜರಿಗೆ ಶರೀರದಲ್ಲಿ ಕೆಲವು ವರ್ಷಗಳಿಂದ ಆಗಾಗ ತುರಿಕೆ ಕಾಣಿಸಿಕೊಳ್ಳುತ್ತಿತ್ತು. ಈ ಬಾರಿ ಕಾಲಿನಲ್ಲಿ ಎಕ್ಸಿಮಾದ ಲಕ್ಷಣಗಳು ತೀವ್ರವಾಗಿ ಕಂಡುಬಂದವು. ಕ್ರಮವಾಗಿ ಅವು ಮಂಡಿಯವರೆಗೂ ಹಬ್ಬಲಾರಂಭಿಸಿತು. ಕೊಲ್ಕತ್ತದ ಚಿಕಿತ್ಸಕರು ಮಹಾರಾಜರಿಗೆ ತಕ್ಷಣವೇ ಹಿಂತಿರುಗಲು ಸಲಹೆ ನೀಡಿದರು. ಆದರೂ ವಿರಜಾನಂದರು ಮತ್ತೂ ಸ್ವಲ್ಪ ಕಾಲ ಅಲ್ಲೇ ಇದ್ದು ಈ ಹೊಸ ತೊಂದರೆಯ ಉಪಶಮನಕ್ಕಾಗಿ ಕಾದರು. ಜನವರಿ ೨೧ರಂದು ಸ್ವಾಮೀಜಿಯವರ ಜಯಂತಿಯನ್ನು ಪೂಜೆ, ಪಠಣ, ದರಿದ್ರ ನಾರಾಯಣ ಸೇವೆ, ಸತ್‌ಚಿಂತನೆಗಳು ಮೂಲಕ ಆಚರಿಸಲಾಯಿತು. ಹತ್ತು ದಿನಗಳ ನಂತರ ಪೂಜ್ಯ ಬ್ರಹ್ಮಾನಂದರ ಜನ್ಮತಿಥಿಯನ್ನೂ ಸಹ ಅದೇ ರೀತಿಯಲ್ಲಿ ಆಚರಿಸಲಾಯಿತು. ಮಹಾರಾಜರ ರೋಗವು ಕಡಿಮೆಯಾಗುವ ಬದಲು ಬರಬರುತ್ತ ಹೆಚ್ಚಾಗತೊಡಗಿತು. ಆದ್ದರಿಂದ ಮಠಕ್ಕೆ ಹಿಂತಿರುಗುವುದನ್ನು ಬಿಟ್ಟು ಗತ್ಯಂತರವಿರಲಿಲ್ಲ. ಫೆಬ್ರವರಿ ೨೩ರಂದು (೧೯೪೯) ಹೊರಟು ೨೫ಕ್ಕೆ ಮಠವನ್ನು ತಲುಪಿ ದರು. ಈ ಬಾರಿ ಟನಕ್‌ಪುರದಿಂದ ಪಿಥೋರಾಗಡ್‌ಗೆ ಮೋಟಾರು ರಸ್ತೆಯೊಂದನ್ನು ನಿರ್ಮಿಸಲಾಗಿತ್ತು. ಫಿಲಿಬಿತ್‌ನ ಸಕ್ಕರೆ ಕಾರ್ಖಾನೆಯ ಮ್ಯಾನೇಜರ್, ಮಿ. ಮಿತ್ರ ಎಂಬುವರು 'ಸುಖೀಡಂಗ್' ಎಂಬಲ್ಲಿಗೆ ಮೋಟಾರು ಕಾರನ್ನು ಕಳುಹಿಸಿದ್ದರು. ಆದ್ದರಿಂದ ಮಹಾರಾಜರು ಮೂರು ಮೈಲಿ ದಂಡಿಯಲ್ಲಿ ಬಂದು, ಸುಖೀಡಂಗ್‌ನಿಂದ ಕಾರಿನಲ್ಲಿ ಫಿಲಿಬಿತ್ ತಲುಪಿ, ಲಕ್ನೌಗೆ ಹೊರಡುವ ರೈಲು ಹಿಡಿದರು.

ಬೇಲೂರು ಮಠಕ್ಕೆ ಬಂದ ನಂತರ ಎಕ್ಸಿಮಾದ ಚಿಕಿತ್ಸೆ ನಡೆಯತೊಡಗಿತು. ತೊಂದರೆ ಕಾಣಿಸಿಕೊಂಡ ಸ್ಥಳಗಳಲ್ಲಿ 'ರಂಜನರಶ್ಮಿ'ಯನ್ನು ಲೇಪಿಸಿಕೊಂಡು ಬರಲು ಅನೇಕ ಬಾರಿ ಕೊಲ್ಕತ್ತೆಯ ಟ್ರಾಪಿಕಲ್ ಸ್ಕೂಲ್ ಆಸ್ಪತ್ರೆಗೆ ಹೋಗಬೇಕಾಗುತ್ತಿತ್ತು. ಜನರಿಗೆ ದರ್ಶನ ನೀಡುತ್ತಿದ್ದರಾದರೂ ದೀಕ್ಷೆಯನ್ನು ನೀಡುತ್ತಿರಲಿಲ್ಲ.

ನ್ಯೂಯಾರ್ಕಿನ ರಾಮಕೃಷ್ಣ ವಿವೇಕಾನಂದ ವೇದಾಂತ ಕೇಂದ್ರದ ಸ್ಥಾಪಕರೂ, ಅಧ್ಯಕ್ಷರೂ ಆದ ಸ್ವಾಮಿ ನಿಖಿಲಾನಂದರು ಜನವರಿಯ ಕೊನೆಯ ವಾರ ಮಠಕ್ಕೆ ಬಂದರು. ಇದು ೧೨ ವರ್ಷಗಳ ನಂತರ ಅವರು ಸ್ವದೇಶಕ್ಕೆ ಭೇಟಿಯಿತ್ತಿರುವುದು. ಆ ಕೇಂದ್ರದ ನಿಷ್ಠಾವಂತ ಸೇವಕರಾದ ಮಿ. ಜಾನ್ ಮೊಫೆಟ್ ಎಂಬ ಅಮೇರಿಕನ್ನರನ್ನೂ ಸಹ ಕರೆತಂದಿದ್ದಾರೆ. ಶ್ರೀರಾಮಕೃಷ್ಣ ಜನ್ಮತಿಥಿಯ ರಾತ್ರಿ ಅವರಿಗೆ ವಿರಜಾನಂದರು ಬ್ರಹ್ಮಚರ್ಯ ವ್ರತದ ದೀಕ್ಷೆಯನ್ನಿತ್ತರು. ಈ ಬಾರಿ ೧೪ ಬ್ರಹ್ಮಚಾರಿಗಳ ಸಂನ್ಯಾಸವೂ, ೧೨ ಜನರ ಬ್ರಹ್ಮಚರ್ಯವೂ ನಡೆಯಿತು. ಸಂನ್ಯಾಸವಾಗುತ್ತದೋ ಇಲ್ಲವೋ ಎಂದು ಆತಂಕಪಡುತ್ತಿದ್ದ ಮಹಾರಾಜರ ಸೇವಕರಿಬ್ಬರ ಕಾಮನೆಯೂ ಸಹ ಪೂರ್ಣಗೊಂಡಿತು.

ತಿಥಿಪೂಜೆಯ ದಿನದಂದು ಸಂಜೆ ಮಂದಿರದ ಪೂರ್ವದಿಕ್ಕಿಗಿರುವ ಮೈದಾನದಲ್ಲಿ ನಡೆದ ಬೃಹತ್ ಸಭೆಯಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಯನ್ನು ಕುರಿತು ಸಮಾಲೋಚಿಸಿದರು. ಅಧ್ಯಾಪಕರಾದ ರಾಧಾಕುಮದ್ ಮುಖ್ಯೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ನಿಖಿಲಾನಂದರು ಇಂಗ್ಲಿಷಿನಲ್ಲಿ ಮಾತನಾಡಿದರು. ಕಾಮಾರಪುಕುರದಲ್ಲಿ ಶ್ರೀರಾಮಕೃಷ್ಣರ ಜನ್ಮಸ್ಥಳದಲ್ಲಿ ಕಟ್ಟಬೇಕೆಂದಿದ್ದ ಮಂದಿರದ ಶಂಕುಸ್ಥಾಪನೆಯನ್ನು ಈ ದಿನದಂದೇ ಉಪಾಧ್ಯಕ್ಷರಾದ ಸ್ವಾಮಿ ಶಂಕರಾನಂದರು ನೆರವೇರಿಸಿದರು. ವಿರಜಾನಂದರ 'ಪರಮಾರ್ಥ ಪ್ರಸಂಗದ' ಇಂಗ್ಲಿಷ್ ಆವೃತ್ತಿಯು ಈ ದಿನವೇ ಬಿಡುಗಡೆಯಾಯಿತು. ಹೋಳಿ ಹಬ್ಬದಂದು ವಿರಜಾನಂದರು ಸಾಧುಗಳ ವಾಸಕ್ಕಾಗಿ ನಿರ್ಮಿಸಲ್ಪಟ್ಟಿದ್ದ ಒಂದಂತಸ್ತಿನ ಮನೆಯ ಉದ್ಘಾಟನೆಯನ್ನು ಮಾಡಿದರು. ಕೊಲ್ಕತ್ತೆಯ ಪ್ರತಿಷ್ಠಿತ ವ್ಯಾಪಾರೀ ಮಿತ್ರರೊಬ್ಬರ ಉದಾರತೆಯಿಂದ ಮಠದ ಅನೇಕ ದಿನಗಳ ಕೊರತೆಯೊಂದು ಈ ರೀತಿ ನಿವಾರಿಸಲ್ಪಟ್ಟಿತ್ತು. ಸ್ವಾಮಿ ನಿಖಿಲಾನಂದರು ಅಮೆರಿಕೆಯಿಂದ ತಂದಿದ್ದ ಚಲನಚಿತ್ರ ಕ್ಯಾಮರಾದಿಂದ ವಿರಜಾನಂದರೊಡಗೂಡಿದ ಅನೇಕ ಗ್ರೂಪ್ ಫೋಟೋಗಳನ್ನು ತೆಗೆದರು.[2]

ದೆಹಲಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಈ ಬಾರಿಯ ಶ್ರೀರಾಮಕೃಷ್ಣ ಜಯಂತಿಯ ಉದ್ಘಾಟನೆಯನ್ನು ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ಜವಹರ್‌ಲಾಲ್ ನೆಹರೂರವರು ನೆರವೇರಿಸಿದ್ದರು. ಶ್ರೀರಾಮಕೃಷ್ಣ–ವಿವೇಕಾನಂದರ ಜೀವನ ಬೋಧನೆ ಮತ್ತು ಶ್ರೀರಾಮಕೃಷ್ಣ ಮಿಷನ್ನಿನ ಕಾರ್ಯ ಪ್ರಣಾಳಿಯ ಸಂಬಂಧವಾಗಿ ನೆಹರೂರವರು ಮಾಡಿದ ಭಾಷಣವು ತುಂಬ ಹೃದಯಸ್ಪರ್ಶಿಯಾಗಿತ್ತು. ಸ್ವಾಮಿ ನಿಖಿಲಾನಂದರೂ ಸಹ ಈ ಸಭೆಯಲ್ಲಿ ತಮ್ಮ ಭಾಷಣ ಮಾಡಿದ್ದರು. ಒಂದು ದಿನ ಅವರು ಪ್ರಧಾನಿಗಳ ನಿಲಯಕ್ಕೆ ಭೇಟಿಯಿತ್ತು ಅಮೆರಿಕಾ ಮತ್ತು ಭಾರತದ ಸಾಂಸ್ಕೃತಿಕ ಸಂಬಂಧದ ಬಗ್ಗೆ ನೆಹರೂರವರೊಂದಿಗೆ ಬಹಳಷ್ಟು ಸಮಯ ಮಾತನಾಡಿ ಬಂದರು.

ಸ್ವಾಮಿ ಮಾಧವಾನಂದರು ದೀರ್ಘಕಾಲ ಸಂಘದ ಕಾರ್ಯದರ್ಶಿಯ ಗುರುತರ ಹೊಣೆಯನ್ನು ಹೊತ್ತಿದ್ದು, ಈಗ ಅತ್ಯಂತ ದಣಿದಿದ್ದರು. ಈ ವರ್ಷ (೧೯೪೯) ಏಪ್ರಿಲ್ ತಿಂಗಳಿನಲ್ಲಿ ಅವರು ಕೆಲಸಮಯದ ಮಟ್ಟಿಗೆ ಕೆಲಸದಿಂದ ವಿರಮಿಸಿದರು. ಕಾರ್ಯದರ್ಶಿಗಳ ಜವಾಬ್ದಾರಿಯು ಈಗ ಸ್ವಾಮಿ ವೀರೇಶ್ವರಾನಂದರಿಗೆ ಹಸ್ತಾಂತರಿಸಲ್ಪಟ್ಟಿತು.

ಏಪ್ರಿಲ್ ೧೫ರಂದು ಕೊಲ್ಕತ್ತಾ ನಿವಾಸಿಗಳ ಪರವಾಗಿ ಸ್ವಾಮಿ ನಿಖಿಲಾನಂದರಿಗೆ ಸಾರ್ವಜನಿಕ ಸ್ವಾಗತವನ್ನು ಕೋರಲಾಯಿತು.

---

೨ ಅವರು ಅಮೆರಿಕಾ ಮುಂತಾದ ವಿದೇಶೀ ಶಾಖಾಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಎಲ್ಲ ಸಂನ್ಯಾಸಿಗಳೊಂದಿಗೂ ಪತ್ರವ್ಯವಹಾರದ ಮೂಲಕ ತುಂಬ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಸಹ–ಅನುಭೂತಿ ಮತ್ತು ಸಲಹೆಗಳ ಮೂಲಕ ಪ್ರತಿಯೊಬ್ಬರಿಗೂ ಸ್ವಾಮೀಜಿಯವರ ಕೆಲಸ ಮಾಡಲು ಪ್ರೇರೇಪಿಸುತ್ತಿದ್ದರು.

ಇದಕ್ಕೆ ಪ್ರತ್ಯುತ್ತರವಾಗಿ ಅವರಿತ್ತ ಅರ್ಥಗರ್ಭಿತವಾದ ಭಾಷಣವು ನೆರೆದವರೆಲ್ಲರ ಮನಸೆಳೆದು ಪ್ರಶಂಸೆಗಳಿಸಿತು. ಹೌರಾ ಟೌನ್ ಹಾಲಿನಲ್ಲೂ ಸಹ ಹೌರಾ ನಿವಾಸಿಗಳ ಪರವಾಗಿ ನಿಖಿಲಾನಂದರಿಗೆ ಅನುರೂಪವಾದ ಸ್ವಾಗತ ಸಭೆಯನ್ನು ಏಪ್ರಿಲ್ ೨೪ ರಂದು ಏರ್ಪಡಿಸಲಾಗಿತ್ತು. ಮೇ ತಿಂಗಳ ಮೊದಲ ಭಾಗದಲ್ಲಿ ನಿಖಿಲಾನಂದರು ಅಮೇರಿಕೆಗೆ ಹಿಂತಿರುಗಿದರು. ವಿರಜಾನಂದರಿಗೆ ಯಾವುದಾದರೂ ವಿಶೇಷ ಔಷಧಿಗಳ ಅಗತ್ಯಬಿದ್ದಲ್ಲಿ ಅದನ್ನು ನಿಖಿಲಾನಂದರು ಅಮೆರಿಕಾದಿಂದ ಕಳುಹಿಸುತ್ತಿದ್ದರು.

ಆಗಾಗ ನಡೆದ ಸಣ್ಣಪುಟ್ಟ ಘಟನೆಗಳನ್ನವಲಂಬಿಸಿಕೊಂಡು ಅವಿಸ್ಮರಣೀಯವಾದ ಪ್ರೀತಿಯು ಮನಃಪಟಲದಲ್ಲಿ ಚಿರಮುದ್ರೆಯನ್ನೊತ್ತುತ್ತದೆ.

ಸೇವಕ ಮಹಾರಾಜರೊಬ್ಬರು ವಿರಜಾನಂದರ ಕೊಠಡಿಯಲ್ಲಿ ರಾತ್ರಿ ಹೊತ್ತು ನೆಲದಲ್ಲಿ ಹಾಸಿಗೆ ಹರಡಿ ಮಲಗಿರುತ್ತಿದ್ದರು; ಕಾರಣ ಮಹಾರಾಜರು ರಾತ್ರಿ ಅನೇಕ ಬಾರಿ ಏಳುತ್ತಿದ್ದರು, ಹಾಗೆ ಎದ್ದಾಗ ಅವರಿಗೆ ಸ್ವಲ್ಪ ಸಹಾಯ ಮಾಡಬೇಕಾಗುತ್ತಿತ್ತು. ಒಂದು ದಿನ ಸೇವಕರು ಎದ್ದಾಗ ನೋಡುತ್ತಾರೆ ತಮ್ಮ ಮುಖವಿಡೀ ಸಿಗರೇಟಿನ ಬೂದಿ! ಅವರಿಗೆ ಏನೂ ತಿಳಿಯದಾಯಿತು. ಯಾರನ್ನಾದರೂ ಕೇಳೋಣವೆಂದರೆ, ಯಾರನ್ನು ತಾನೇ ನಂಬುವುದು?! ಇದರ ರಹಸ್ಯವನ್ನು ಮಹಾರಾಜರೇ ಸ್ವತಃ ಬಹಿರಂಗಪಡಿಸಿದರು. ಚಹಾಕುಡಿಯುವಾಗ ನಗುನಗುತ್ತ ಬಾಕಿ ಇಬ್ಬರು ಸೇವಕರನ್ನು ಕುರಿತು, ''ಕೇಳಿ ಇಲ್ಲಿ, ಮ... ನು.... ನಿನ್ನೆ ರಾತ್ರಿ ನೈಟ್ ಡ್ಯೂಟಿ ಕೊಟ್ಟಿದ್ದಾನೆಂದು. ರಾತ್ರಿಯಂತೂ ನಾನು ಶೌಚಕ್ಕೆ ಹೋಗಬೇಕಾಯಿತು. ಹಾಸಿಗೆಯಿಂದಲೇ ಬೆಳಕುಹೊತ್ತಿಸಿದೆ. ನಂತರ ಮ..., ಮ...., ಎಂದು ಅನೇಕ ಬಾರಿ ಕರೆದೆ, ಸ್ವಲ್ಪವೂ ಓಗೊಡಲಿಲ್ಲ. ಶೌಚಾಲಯದಿಂದ ಮತ್ತೆ ಹಲವು ಬಾರಿ ಅವರನ್ನು ಕರೆದೆ, ಅವನು ಗೊರಕೆಯನ್ನು ಇನ್ನೂ ಜೋರಾಗಿ ಹೊಡೆಯಲಾರಂಭಿಸಿದ. ಕೊನೆಗೆ ನಾನೇ ಅವನ ಹಾಸಿಗೆಯ ಹತ್ತಿರ ಹೋಗಿ, ಸೊಳ್ಳೆಪರದೆ ಎತ್ತಿ ಮತ್ತೆ ಕರೆದೆ. ಯಾವ ಪ್ರತಿಕ್ರಿಯೆಯೂ ಇಲ್ಲ! ಆಗೇನು ಮಾಡಿದೆ ಗೊತ್ತೆ? ಆ್ಯಷ್ಟ್ರೇಯಿಂದ ಬೂದಿಯನ್ನು ತಂದು ಅವನ ತಲೆಯ ಮೇಲೆ ಸುರಿದೆನಾನು ಅವನನ್ನು ಕರೆದಿದ್ದೆ ಎಂಬುದಕ್ಕೆ ಸಾಕ್ಷಿಯಿರಲಿ ಎಂದು'' ಎಂದರು.

ಸೇವಕರು ಪಕ್ಕದಲ್ಲೇ ನಿಂತಿದ್ದರು. ಪಾಪ ಅವರದ್ದೇನೂ ದೋಷವಿರಲಿಲ್ಲ! ಏಕೆಂದರೆ ಅಂದವರಿಗೆ ಅತ್ಯಧಿಕವಾದ ಪರಿಶ್ರಮವಾಗಿತ್ತು. ಮಹಾರಾಜರು ತುಂಬ ನಗುತ್ತಿದ್ದುದನ್ನು ನೋಡಿ ಸ್ವಲ್ಪ ಧೈರ್ಯ ತಂದುಕೊಂಡು ಸೇವಕರು ಹೇಳಿದರು, ''ನಿಮಗೂ ಅಷ್ಟೇ ಮಹಾರಾಜ್, ತುಂಬ ನಿದ್ದೆ''.

**ವಿರಜಾನಂದರು:** ಹಾಗೆಂದರೇನು? ಎರಡು ಮೂರು ಸಲ ಕರೆದರೇನೇ ನಾನು ಎದ್ದುಬಿಡುವೆನಲ್ಲ.

**ಸೇವಕ:** ಸರಿ, ನಾನು ಒಂದು ದಿನ ತೋರಿಸುತ್ತೇನೆ.

ಕೆಲವು ದಿನಗಳ ನಂತರ ಒಂದು ದಿನ ವಿರಜಾನಂದರು ದೀಕ್ಷೆ ನೀಡಿ ಬರಲು ತುಂಬ ತಡವಾಗಿ ಹೋಯಿತು. ಹೀಗಾಗಿ ಆಹಾರಾನಂತರ ವಿಶ್ರಾಂತಿಗೆ ಹೋಗಲೂ ಸಹ ವಿಳಂಬವಾಯಿತು. ಹಿಂದೆ ಹೇಳಿದ ಸೇವಕರದ್ದು ಅಂದು ಸಂಜೆಯ ಕೆಲಸ. ಅಂದು ಸಂಜೆ ಐದು ಗಂಟೆಗೆ ಮಹಾರಾಜರ ಕೊಠಡಿಗೆ ಹೋಗಿ ಸೇವಕರು ಯಥಾ ರೀತಿ ಕಿಟಕಿಗಳನ್ನು ತೆರೆದರು. (ಹೃದಯದ ದುರ್ಬಲತೆ ಇದ್ದದ್ದರಿಂದ ಮಹಾರಾಜರು ನಿದ್ರಿಸುತ್ತಿದ್ದಾಗ ಸಾಧಾರಣವಾಗಿ ಅವರನ್ನು ಕೂಗಿ ನಿದ್ರಾಭಂಗ ಮಾಡುವುದನ್ನು ನಿಷೇಧಿಸಲಾಗಿತ್ತು). ಆ ಶಬ್ದದಿಂದ ನಿದ್ರಾಭಂಗವಾಗದಿದ್ದುದನ್ನು ಕಂಡು ಕಾಲಿನ ದಿಂಬನ್ನು ತೆಗೆದುಬಿಟ್ಟರು. ನಂತರ ಅವರ ಕಾಲಮೇಲೆ ಮೃದುವಾಗಿ ಕೈಯಾಡಿಸತೊಡಗಿದರು. ಇದರಿಂದಲೂ ಎಚ್ಚರವಾಗದಿದ್ದಲ್ಲಿ ಮತ್ತೆ ಶಬ್ದವಾಗುವಂತೆ ಕಿಟಕಿಗಳನ್ನು ತೆಗೆಯುವುದು. ಸೇವಕರು ಅದನ್ನೂ ಮಾಡಿದರು. ಇದರಿಂದಲೂ ಎಚ್ಚರವಾಗದ್ದನ್ನು ಕಂಡು ಮತ್ತೆ ಕಾಲಮೇಲೆ ಮೃದುವಾಗಿ ಕೈಯಾಡಿಸತೊಡಗಿದರು. ಜೊತೆಜೊತೆಗೆ ಭಜನೆಯೊಂದನ್ನು ಗುಣುಗುಟ್ಟತೊಡಗಿದರು. ಇದರಿಂದಲೂ ಏನೂ ಲಾಭವಾಗಲಿಲ್ಲ. ಆಗ ಅವರ ತಲೆಯ ಮೇಲೆ ಕೈಯಾಡಿಸತೊಡಗಿದರು. ಸಂಜೆಯಾಗಿಬಿಟ್ಟಿದೆ, ಹೊರಗೆ ದರ್ಶನಾರ್ಥಿಗಳ ಗುಂಪು ಹೆಚ್ಚುತ್ತಿದೆ; ಮಹಾರಾಜರಾದರೋ ಗಾಢವಾಗಿ ನಿದ್ರಿಸುತ್ತಿದ್ದಾರೆ. ಅಷ್ಟರಲ್ಲಿ ಮತ್ತೊಬ್ಬ ಸೇವಕರು ಕೊಠಡಿಗೆ ಬಂದು ಸಮಾಚಾರವೇನೆಂದು ಮೊದಲನೆಯವರನ್ನು ಕೇಳಿದರು. ಮಹಾರಾಜರನ್ನು ಎಚ್ಚರಿಸಲಾಗುತ್ತಿಲ್ಲ ಎಂದವರು ತಿಳಿಸಿದರು. ಅದಕ್ಕೆ ಎರಡನೆಯವರು ಮಹಾರಾಜರನ್ನು ಜೋರಾಗಿ ಕರೆದು ಎಚ್ಚರಿಸಿದರು. ಚಹಾ ಕುಡಿಯುವಾಗ ಮಹಾರಾಜರು ಹಿಂದೆ ಹೇಳಿದ ಸೇವಕರಿಗೆ ''ಇಂದು ನೀನು ಮುಯ್ಯಿ ತೀರಿಸಿಕೊಂಡೆ ಅಲ್ಲವೆ?'' ಎಂದು ನಕ್ಕರು. ಸೇವಕರೂ ನಗುತ್ತಿದ್ದಾರೆ. ಮಹಾರಾಜರೆಂದರು, ''ಇಂದು ತುಂಬ ಸುಸ್ತಾಗಿತ್ತು. ಇನ್ನೆಷ್ಟು ದಿನ ತಾನೇ ಈ ಶರೀರ ಉಳಿದಿರುತ್ತದೆ ಹೇಳು?''

*(ಮುಂದುವರಿಯುವುದು)*

## ದಾನಗುಣ

**ಹಸನಾಗಿ ಬದುಕುವೊಡೆ । ಕುಶಲನೆಂದೆನಿಸುವೊಡೆ**
**ಪಶುಪತಿಯ ಪದವ ಪಡೆಯುವೊಡೆ । ಹಸಿದವರಿ-**
**ಗಶನವಿಕ್ಕು ಸರ್ವಜ್ಞ ॥**

**ಕೊಡುವಾತನೇ ಮೃಡನು । ಪಡೆವಾತನೇ ನರನು**
**ಒಡಲು-ಒಡವೆಗಳು ಕೆಡೆದು । ಹೋಗದ ಮುನ್ನ**
**ಕೊಡು ಪಾತ್ರವರಿದು ಸರ್ವಜ್ಞ ॥**